ಶ್ರೀ ಐ. ಸೋಮಶೇಖರಪ್ಪ.—ಈ ವ್ಯವಹಾರದ ಬಗ್ಗೆ ಸರ್ಕಾರದವರು ಷೆಡ್ಯೂಲ್ ಬ್ಯಾಂಕಿನಿಂದ ಪಡೆದ ಹಣಕ್ಕೆ ಜಾಮೀನು ನೀಡಿರುವುದರ ಜೊತೆಗೆ, ಆ ಹಣಕ್ಕೆ ಬಡ್ಡಿ ಕೊಟ್ಟಿದ್ದು ನಿಜ ವಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಷೆಡ್ಯೂಲ್ ಬ್ಯಾಂಕಿನಿಂದ ಪಡೆದ ಹಣಕ್ಕೆ ಬಡ್ಡಿ ಕೊಟ್ಟಿದ್ದು ಖರೆ ಇದೆ.

Sri B. P. GANGADHAR.—These are book accounts and the real accounts are not there. Have the Government enquired into the matter ?

ಶ್ರೀ ಪಿ. ಎಂ. ನಾಡಗೌಡ.—ಅವರ ಕಡೆ ಇನ್ನೂ ಗೊಬ್ಬರ ಇದೆ. ಅದನ್ನು ಅವರು ಪ್ರೈಮರಿ ಸೊಸೈಟಿಗಳಿಗೆ ವಾರಾಟ ಮಾಡಲು ಕೊಡುತ್ತಿದ್ದಾರೆ. ಈ ಬಗ್ಗೆ ಪೂರ್ಣವಾಗಿ ಅಕೌಂಟ್ಸನ್ನು ರೀಕನ್‌ಸಿಲಿಯೇಷನ್ ಮಾಡಿದಮೇಲೆ ರಿಯರ್ ಅಕೌಂಟ್ಸ್ ನಭೆಯ ಮುಂದೆ ಇಡುವುದಕ್ಕೆ ಅವಕಾಶವಾಗುತ್ತದೆ.

Loans given to Non-Members by the President of Besalkoppa Large Scale Joint-Agricultural Co-operative Society

67. Sri M. NAGAPPA (Raichur).—

Will the Minister for Development be pleased to state :—

(*a*) whether it is a fact that the President of Bisalakop Group Large-scale Joint Agricultural Co-operative Society has given loan of thousands of rupees to non-members, by misusing his powers ;

(*b*) if so, the action they have proposed to take in this behalf (from 1966 onwards) ;

(*c*) whether it is a fact that the President of the said Co-operative Society has given more than Rs. 1,00,000 to four members as loan ;

(*d*) if so, the action taken later on ?

Sri B. L. GOWDA (Deputy Minister for Co-operation).—

(*a*) Granted for a few persons.

(*b*) Loans given have been recovered fully. Instructions have been issued to the said Society, not to give loans to non-members henceforward.

(*c*) No.

(*d*) Does not arise.

ಶ್ರೀ ಎಂ. ನಾಗಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ ಕೆಲವರಿಗೆ ಮಾತ್ರ ಕೊಟ್ಟಿರುತ್ತಾರೆ ಎಂದು ಹೇಳಲಾಗಿದೆ. ಕೆಲವರು ಅಂದರೆ ಎಷ್ಟು ಜನ, ಮತ್ತು ಅವರು ಯಾರು ಯಾರು ಎಂಬುದನ್ನು ಹೇಳುತ್ತೀರಾ, ಎಷ್ಟೆಷ್ಟು ಹಣವನ್ನು ಕೊಡಲಾಗಿತ್ತು, ಮತ್ತು ಕೊಟ್ಟ ಹಣಕ್ಕೆ ೮ ಪರ್‌ಸೆಂಟ್ ಇಂಟರೆಸ್ಟ್ ಹಾಕಿದ್ದು ನಿಜವೇ ?

†ಶ್ರೀ ಬಿ. ಎಲ್. ಗೌಡ.—ಇಬ್ಬರಿಗೆ ಕೊಡಲಾಗಿದೆ. ಒಬ್ಬರ ಹೆಸರು ನಾಗೇಶ ಹರಿನಾಯಕ್ ಎಂಕಾಂಬಿ, ಇವರಿಗೆ 13,878 ರೂಪಾಯಿಗಳನ್ನು ಕೊಡಲಾಗಿತ್ತು, ಇನ್ನೊಬ್ಬರ ಹೆಸರು, ರಘುನಾಥಪಾಂಡುರಂಗನಾಯಕ್, ಇವರಿಗೆ 1,500 ರೂಪಾಯಿಗಳನ್ನು ಕೊಡಲಾಗಿತ್ತು. ಈ ಹಣದ ಮೇಲೆ ಬೇರೆಯವರಿಗೆ ಹಾಕಲಾಗುವಂತೆ ಇಂಟರೆಸ್ಟ್ ಹಾಕಲಾಗಿತ್ತು.

ಶ್ರೀ ಎಂ. ನಾಗಪ್ಪ.—(ಇ) ಪ್ರಶ್ನೆಗೆ ಉತ್ತರವಾಗಿ ನಿಜವಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಈ ಬಗ್ಗೆ ಕೆಲವು ದಾಖಲೆಗಳನ್ನು ಒದಗಿಸಿದರೆ ಅವರಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಕಾನೂನು ಪ್ರಕಾರ ಯಾವ ಕ್ರಮ ತೆಗೆದುಕೊಳ್ಳಬೇಕಾಗುತ್ತದೋ ಅಂತಹ ಕ್ರಮ ತೆಗೆದುಕೊಳ್ಳುತ್ತೇವೆ.

Sri M. S. KRISHNAN.—Is the return of the loans by non-members enough punishment for the society or is the Government thinking of taking stringent action ?

Sri B. L. GOWDA.—They have violated the rules and we have warned them not to do that.

ಶ್ರೀ ಎನ್. ಜಿ. ಹಾಲಪ್ಪ.—ನಾಲ್ಕು ಜನರಿಗೆ ಒಂದು ಲಕ್ಷ ರೂಪಾಯಿಗಿಂತ ಹೆಚ್ಚು ಹಣ ಕೊಟ್ಟಿಲ್ಲ ಎಂದು ಹೇಳಿದ್ದೀರಿ ? ಆದರೆ ಇವರಿಗೆ ಕೊಟ್ಟ ಹಣ ಎಷ್ಟು ವರ್ಷಗಳಲ್ಲಿ ವಸೂಲಾಯಿತು ?

ಶ್ರೀ ಬಿ. ಎಲ್. ಗೌಡ.—ಇವರಿಗೆ ಕೊಟ್ಟ ಹಣವೆಲ್ಲಾ 30-7-70ರ ವೇಳೆಗೆ ವಸೂಲಾಗಿತ್ತು.

ಶ್ರೀ ಜೋಳಾ ರಘುರಾಮಶೆಟ್ಟಿ.—ಉತ್ತರದಲ್ಲಿ ಈ ಸಂಘಕ್ಕೆ ಇನ್ನೂಮುಂದೆ ಸಾಲ ಕೊಡ ಕೂಡದೆಂದು ಎಚ್ಚರಿಕೆ ನೀಡಲಾಗಿದೆ ಎಂದು ಹೇಳುತ್ತೀರಿ, ಇದೇ ರೀತಿ ಇನ್ನು ಮುಂದೆ ಬರೀ ಎಚ್ಚರಿಕೆ ಕೊಟ್ಟು ಮುಗಿಸಬೇಕೆಂದು ಇದ್ದೀರಾ ?

ಶ್ರೀ ಬಿ.ಎಲ್. ಗೌಡ.—ಇದರಲ್ಲಿ ಸೊಸೈಟಿ ಕಟ್ಟಿಡ ಕಟ್ಟುವ ಕಂಟ್ರಾಕ್ಟರಿಗೇನೇ ಸಾಲ ಕೊಟ್ಟಿದ್ದರು. ಇದು ತಪ್ಪು. ಈ ರೀತಿ ಕೊಡಬಾರದೆಂದು ಸೂಚನೆ ಕೊಡಲಾಗಿದೆ ಮತ್ತು ಇನ್ನು ಸದಸ್ಯರಲ್ಲದವರಿಗೆ ಈ ರೀತಿ ಸಾಲ ಕೊಡಕೂಡದೆಂದು ಸೂಚನೆಗಳನ್ನೂ ಕೊಡಲಾಗಿದೆ.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ನಾಲ್ಕು ಲಕ್ಷಕ್ಕಿಂತ ಸಾಲವನ್ನು ಕೊಡುವಾಗ ಯಾವ ಸೆಕ್ಯೂರಿಟಿಯೂ ಇಲ್ಲದೆ ಸದಸ್ಯರಲ್ಲದವರಿಗೆ ಕೊಟ್ಟಿದ್ದಾರೆ ಎಂದರೆ ಇಲ್ಲಿ ಕೊಟ್ಟಿರುವ ಒಂದು ಲಕ್ಷ ದಷ್ಟು ಸಾಲವನ್ನು ನಾಲ್ಕು ಜನರಿಗೆ ಸೇರಿಸಿದಂತೆ ಒಬ್ಬೊಬ್ಬರಿಗೆ 25 ಸಾವಿರ ಇಲ್ಲವೇ ಸ್ವಲ್ಪ ಹೆಚ್ಚು ಕಡಿಮೆಯಾಗಿ ಒಂದು ಲಕ್ಷವನ್ನೂ ಪೂರ್ತಿಯಾಗಿ ಹಂಚಿದ್ದಾರಲ್ಲವೇ ?

ಶ್ರೀ ಬಿ. ಎಲ್. ಗೌಡ.—ಯಾರು ಯಾರಿಗೆ ಯಾವ ರೀತಿ ಹಂಚಿದ್ದಾರೆನ್ನುವುದಕ್ಕೆ ನನ್ನಲ್ಲಿ ವಿವರವಾದ ರೆಫರೆನ್ಸ್‌ಗಳು ಇಲ್ಲಲ್ಲ.

Global Tenders for Laying of Water Main Pipes

69. Sri T. R. SHAMANNA (Fort).—

Will the Minister of State for Municipal Administration be pleased to state :—

(*a*) the number of tenders received (when Global Tenders were called) to lay water main pipes, etc., for drawing water from the Cauvery River to Bangalore City and the tender amounts quoted by each of the firms in respect of the above work ;

(*b*) the name of the Firm that was entrusted with the work for laying the water main pipe lines, by the Bangalore Water Supply and Sewerage Board ;

(*c*) whether the tender quoted by the firm as referred to in (*b*) was the lowest and the basis for the selection of this Tender ;

(*d*) whether there is a clause in the Agreement executed with the said Firm that Advance of Rs. 30 lakhs would be paid to the Firm of which tenders are accepted ;